# <u>ಬೇಡವೆನ್ನ ನೀನು ಗೋಪಮ್ಮ ಕಾಡುವ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 78
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 411
3. **Note:** The lyrics given here are as per Ref. 1. The wordings as per Ref. 2 are slightly different, but are not considered here.

ರಾಗ: ತೋಡಿ ತಾಳ: ಅಟ

ಬೇಡವೆನ್ನ ನೀನು ಗೋಪಮ್ಮ ॥ ಪ ॥
ಕಾಡುವ ಕೃಷ್ಣಗೆ ಕರೆದು ಬುದ್ಧಿಯ ಹೇಳೆ ॥ ಅಪ ॥

ಎಣ್ಣೆ ಮಂಡೆಯಲಿ ಬಣ್ಣದ ಬಚ್ಚಲೊಳಗಿರೆ
ಬಣ್ಣಿಸಿ ಅಟಕಾಳಿ ಹಚ್ಚುವೆನೆನುತಲಿ
ಬೆನ್ನು ಒರಸಲು ಬಂದ ಬೆದರೇಳ್ವರ
ಮುನ್ನ ತಕ್ಕೈಸಿಕೊಂಡ ಗೋಪಮ್ಮ ನಿನ್ನ
ಚಿಣ್ಣ ಸಿರಿಗೇಡಿಯು ಎನ್ನ ನಾಚಿಕೆಗೊಂಡ ॥ 1 ॥

ನೆಲುವಿಗೆ ಹಾಲ ಏರಿಸುವಳ ಕೈವಿಡಿದು
ಕಿಲಿಕಿಲಿ ಕಿವಿಮಾತ ಹೇಳುವೆ ಎನುತಲಿ
ಕಲೆಯನಿಕ್ಕಿದ ಗಲ್ಲಕೆ ಮೇಲ್ಮಲಕಿನ
ತಳಕಿಕ್ಕಿ ಕೆಡಹಲಿಕೆ ಕೆಳಗೆ ಬಿದ್ದು
ಬಳಲಿ ಬಂದೆವೆ ನಿಮ್ಮ ಬಳಿಗೆ ಗೋಪಮ್ಮ ॥ 2 ॥

ಮನೆ ಮನೆಯೊಳು ದಂಪತಿಗಳಿದ್ದ ಮಂಚ-
ವನು ನಡು ಬೀದಿಯೊಳ್ ಹಾಕಿ ಕಲೆವನೆ ಕೃಷ್ಣ
ಮನುಮಥನಯ್ಯ ಕಾಣೆ ಈತನು ಮಹಾ
ಮುನಿಗಳ ಮನಕೆ ನಿಲುಕದಿಪ್ಪಗೆ ಮೂಲೋಕಕೆ
ಘನ ಮಹಿಮ ನಮ್ಮ ಶ್ರೀ ಪುರಂದರ ವಿಠಲಗೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇನ್ನೊಬ್ಬ ಗೋಪಿ ಬಂದು, ಕೃಷ್ಣನ ಮೇಲಿನ ತನ್ನ ದೂರನ್ನು ಹೇಳುತ್ತಾಳೆ.

**ಅಟಕಾಲಿ** = ಸೀಗೆ, ಅಂಟಾಳಕಾಯಿ, ಅರಿಶಿಣ, ಎಣ್ಣೆ ಇವುಗಳ ಮಿಶ್ರಣ. ಎರಕೊಳ್ಳುವಾಗ ಇದನ್ನು ಮೈಗೆ ಹಚ್ಚಿ ತಿಕ್ಕಿಕೊಳ್ಳುವವರು.

**ತಕ್ಕೈಸು** = ಆಲಿಂಗಿಸು, ಅಪ್ಪಿಕೊಳ್ಳು

**ಮಲಕಿನ ತಳಕು** = ಹಗ್ಗದ ತೊಡಕು

**Classification:** Keerthane,
**Ankita:** purandara vittala
**Location:** NA
**Category:** Krishna Leele
**Sub-Category:** Krishna, gopi, buddi, nachike, halu, kai, kivi, mane, manmatha, muni, loka,
**Pravachana:** NA
**Explanation:** NA